**ದಿನಾಂಕ: 13/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: 6 ರಿಂದ 9 ನೇ ಪ್ರತಿವಾದಿಗಳ ಪರ ಶ್ರೀ. ಸಿ ಕೆ ಎಂ ವಕೀಲರಿಂದ:**

1. ವಾದಿ ನನ್ನ ತಂದೆ. ನನ್ನ ತಂದೆಗೆ ನಾನು ಮತ್ತು ರವಿ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ನಳಿನಿ ಎಂಬ ಹೆಣ್ಣು ಮಗಳು. ರವಿಯವರು ಈಗ ತೀರಿಕೊಂಡಿದ್ದಾರೆ. ರವಿಯವರಿಗೆ ಇಬ್ಬರು ಮಕ್ಕಳು. ಅವರ ಹೆಸರು ದರ್ಶನ್ ಮತ್ತು ದೀಕ್ಷಿತ್. ದರ್ಶನ್ ಮತ್ತು ದೀಕ್ಷಿತ್ ಕಂಪಲಾಪುರ ಗ್ರಾಮದಲ್ಲಿದ್ದಾರೆ. ರವಿಯವರ ಹೆಂಡತಿಯ ಹೆಸರು ಶೋಭ, ಅವರೂ ಸಹ ಕಂಪಲಾಪುರದಲ್ಲಿದಾರೆ. ಮಾರಿಗುಡಿ ಬೀದಿ, ಹುಣಸೂರು ಟೌನ್ ನಲ್ಲಿ ನನ್ನ ಅಕ್ಕ ನಳಿನಿ ಇದ್ದಾರೆ.

2. ನನ್ನ ತಂದೆ ನಾಗರಾಜು ಮತ್ತು 1 ನೇ ಪ್ರತಿವಾದಿಯ ತಾತನ ಹೆಸರು ಪುಟ್ಟರಾಮಯ್ಯ ಬಿನ್ ರಾಮಸ್ವಾಮಿ ಎಂದರೆ ಸರಿ. ಪುಟ್ಟರಾಮಯ್ಯ ಬಿನ್ ರಾಮಸ್ವಾಮಿಯವರು ಕಂಪಲಾಪುರದಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರಿಗೆ ಜವರಪ್ಪ ಎಂಬ ಒಬ್ಬ ಮಗ ಎಂದರೆ ಸರಿ. ಪುಟ್ಟರಾಮಯ್ಯ ರವರನ್ನು ನಾನು ನೋಡಿಲ್ಲ. ಈಗ ನನಗೆ 43 ವರುಷ. ನಾನು ಹುಟ್ಟುವ 2 ವರುಷಗಳ ಹಿಂದೆ ಅವರು ತೀರಿಕೊಂಡರು. ಈ ದಾವೆ ಹೂಡುವ 50 ವರುಷಗಳ ಹಿಂದೆ ಪುಟ್ಟರಾಮಯ್ಯ ಬಿನ್ ರಾಮಸ್ವಾಮಿಯವರು ಮರಣಗೊಂಡರು ಎಂದರೆ ಸರಿಯಲ್ಲ. 1991 ರಲ್ಲಿ ಜವರಪ್ಪ ನವರು ತೀರಿಕೊಂಡರು. ಜವರಪ್ಪ ರವರು ಈ ದಾವೆ ಹೂಡುವ 30 ವರುಷಗಳ ಹಿಂದೆ ತೀರಿಕೊಂಡರು ಎಂದರೆ ಸರಿಯಲ್ಲ.

3. ಪುಟ್ಟರಾಮಯ್ಯ ಬಿನ್ ರಾಮಸ್ವಾಮಿ ರವರು ಬದುಕಿದ್ದಾಗ ಮನೆಯ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ. ಅವರು ಮರಣಗೊಂಡ ನಂತರ ಅವರ ಮಗ ಜವರಪ್ಪ ನವರು ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದರು ಎಂದರೆ ಸರಿ. ಜವರಪ್ಪ ನವರಿಗೆ ನನ್ನ ತಂದೆ ಹಿರಿಯ ಮಗ ಮತ್ತು ಮೃತ 1 ನೇ ಪ್ರತಿವಾದಿ ಕಿರಿಯ ಮಗ ಎಂದರೆ ಸರಿ. ಜವರಪ್ಪ ನವರು ತೀರಿಕೊಂಡ ನಂತರ ನನ್ನ ತಂದೆ ಒಟ್ಟು

ಕುಟುಂಬದ ಯಜಮಾನಿಕೆಯನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮರಣಗೊಂಡ ನಂತರ ನನ್ನ ತಂದೆ ತೀರಿಕೊಂಡರು ಎಂದರೆ ಸರಿ. ಒಟ್ಟು ಕುಟುಂಬದ ಯಜಮಾನಿಕೆಯನ್ನು 1 ನೇ ಪ್ರತಿವಾದಿ ಕೆ ಜೆ ಕೃಷ್ಣ ರವರು ಮಾಡುತ್ತಿದ್ದರು. ಕಾರಣ ಅವರು ರಾಜಕೀಯದಲ್ಲಿ ಓಡಾಡುತ್ತಿದ್ದರು.

4. ನನ್ನ ತಂದೆ ಮರಣಗೊಂಡಾಗ ಅವರಿಗೆ 68 ವರುಷ ವಯಸ್ಸಾಗಿತ್ತು. ನನ್ನ ತಂದೆ, ತಾಯಿ ಮತ್ತು ನಾವು ಮಕ್ಕಳು ಒಂದೇ ಮನೆಯಲ್ಲಿ ಇದ್ದೆವು. ಸಾಕ್ಷಿಯು ಮುಂದುವರೆದು ಒಟ್ಟು ಕುಟುಂಬದಲ್ಲಿದ್ದೆವು ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದಲ್ಲಿ ನಮ್ಮ ತಂದೆಯ ಕುಟುಂಬ ಮತ್ತು ಚಿಕ್ಕಪ್ಪನ ಕುಟುಂಬ ಒಟ್ಟಿಗೆ ಇದ್ದೆವು. ನನ್ನ ಅತ್ತೆಯಂದಿರು ಬಂದು ಹೋಗುತ್ತಿದ್ದರು. ನನ್ನ ತಂದೆಯ ಸಹೋದರಿಯರು 3 ಜನ, ಅವರ ಹೆಸರು ಮಹದೇವಮ್ಮ, ಜಯಂತಿ ಮತ್ತು ಬೇಬಿ. ಅವರಿಗೆ ಮದುವೆ ಆಗಿದೆ. ಅವರ ಮದುವೆಯನ್ನು ಒಟ್ಟು ಕುಟುಂಬದಲ್ಲಿ 1 ನೇ ಪ್ರತಿವಾದಿ ಮಾಡಿದ್ದರು .

5. ಮೃತ 1 ನೇ ಪ್ರತಿವಾದಿಗೆ 4 ಜನ ಮಕ್ಕಳು. ನಮ್ಮ ಮನೆಗೂ 1 ನೇ ಪ್ರತಿವಾದಿಯ ಮನೆಗೂ 200 ಮೀಟರ್ ಅಂತರ ಇದೆ ಎಂದರೆ ಸರಿ. ಜವರಪ್ಪ ನವರು ವಾಸ ಮಾಡುತ್ತಿದ್ದ ಮನೆಯಲ್ಲಿ ನಾವು ವಾಸಿಸುತ್ತಿದ್ದೇವೆ. 1 ನೇ ಪ್ರತಿವಾದಿ ವಾಸಿಸುತ್ತಿರುವ ಮನೆಯು ಒಟ್ಟು ಕುಟುಂಬದಲ್ಲಿ ನಾವು ಮತ್ತು ಅವರು ಕಟ್ಟಿಸಿದಂತಹ ಮನೆ. ನಾವು ವಾಸಿಸುತ್ತಿರುವ ಮನೆಗೆ ಸುಮಾರು 50 ವರುಷ ವಯಸ್ಸಾಗಿದೆ. ಈ ದಾವೆ ಹೂಡಿದ ನಂತರ 1 ನೇ ಪ್ರತಿವಾದಿಯು ಬೇರೆ ಹೋಗಿ ಮನೆಯನ್ನು ಕಟ್ಟಿದ್ದಾರೆ. ನೀವು ವಾಸಿಸುತ್ತಿರುವ ಮನೆ ಜವರಪ್ಪನವರು ಕಟ್ಟಿಸಿದಂತಹ ಮನೆ ಎಂದು ನಿಮ್ಮ ವಕೀಲರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ತಿಳಿಸಿದ್ದೇನೆ ಎಂದು ನುಡಿಯುತ್ತಾ ನಾವು ಒಟ್ಟು ಕುಟುಂಬದಲ್ಲಿ ವಾಸಿಸುತ್ತಿರುವ ಮನೆ ಎಂದು ತಿಳಿಸಿದ್ದೆ ಎಂದು ನುಡಿಯುತ್ತಾರೆ. ಜವರಪ್ಪನವರು ಕಟ್ಟಿಸಿದಂತಹ ಮನೆಗೆ ಹಿತ್ತಲು ಇದೆ ಎಂದರೆ ಸರಿ. ಸದರಿ ಹಿತ್ತಲ ವಿಸ್ತೀರ್ಣ ಪೂಪಃ 10.7 ಮೀಟರ ಇದೆ. ದಃಉಃ 21 ಮೀಟರ್ ಇದೆ. ಸದರಿ ಮನೆ ಪೂಪಃ 6.2 ಮೀಟರ್ ಮತ್ತು ಉಃದಃ 19 ಮೀಟರ್ ಇದೆ. 2015-16 ನೇ ಸಾಲಿನಲ್ಲಿ ಸದರಿ ಮನೆ

ಮತ್ತು ಹಿತ್ತಲ್ಲನ್ನು ಮಾರಾಟ ಮಾಡಿದರೆ ಸುಮಾರು 15 ಲಕ್ಷಕ್ಕೆ ಮಾರಾಟ ಮಾಡಬಹುದಾಗಿತ್ತು.

6. 1 ನೇ ಪ್ರತಿವಾದಿ ಸುಮಾರು 20x25 ಮೀಟರ್ ಅಳತೆಗೆ ಮನೆಯನ್ನು ಕಟ್ಟಿರಬಹುದು. ಆ ಮೆನೆಗೆ ಹಿತ್ತಲು ಇಲ್ಲ, ಆದರೆ ಸ. ನಂ.397/1 ರ ಜಮೀನಿನಲ್ಲಿ ಕಟ್ಟಿದ್ದಾರೆ. ಆ ಮನೆ ಕಟ್ಟಲು ಸುಮಾರು 5 ರಿಂದ 6 ಲಕ್ಷ ಖರ್ಚು ಆಗಿರಬಹುದು.

(ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**